ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ದೀಪಕ್ ಕುಮಾರ್ ಮತ್ತು ಇತರರು -ವಿರುದ್ಧ-ರತನ್ಲಾಲ್ ಮತ್ತು ಮತ್ತೊಬ್ಬರು

ಕ್ರಿಮಿನಲ್ ಅಪೀಲು ಸಂ. 345/2010, ದಿನಾಂಕ 13 ನೇ ಏಪ್ರಿಲ್, 2016

ತೀರ್ಪು

ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:

ಪ್ರಸ್ತುತ ಅಪೀಲನ್ನು, ಸೆಷನ್ಸ್ ಪ್ರಕರಣಸಂಖ್ಯೆ: 7/2003 ರಲ್ಲಿ, ಮಾನ್ಯ ಪೀಠಾಸೀನ ಅಧಿಕಾರಿ, ತ್ವರಿತಗತಿ ನ್ಯಾಯಾಲಯ, ಬೆಂಗಳೂರು ಇವರು ಹೊರಡಿಸಿದ 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆ ಮಾಲುಗಳ ಅಂತಿಮ ವಿಲೆಗೆ ಸಂಬಂಧಿಸಿದ ತೀರ್ಪಿನ ಭಾಗವನ್ನು ಪ್ರಶ್ನಿಸಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 454 ( 1) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದೆ.

2. ಸೆಷನ್ಸ್ ಮೊಕದ್ದಮೆಸಂಖ್ಯೆ: 7/2003 ರಲ್ಲಿ, 1 ನೇ ಅಪೀಲುದಾರನು ಮೊದಲನೇ ಆರೋಪಿಯಾಗಿದ್ದಾನೆ.2 ನೇ ಮತ್ತು 3 ನೇ ಅಪೀಲುದಾರರು, ಮೃತ ಪತ್ನಿ ರಾಧಾ ಮತ್ತು 1 ನೇ ಅಪೀಲುದಾರರಿಗೆ ಜನಿಸಿರುವ ಮಕ್ಕಳಾಗಿರುವರು.ಭಾರತ ದಂಡ ಸಂಹಿತೆಯ 34 ನ್ನು ಓದಿಕೊಂಡು, 498 ಎ, 304 ಬಿ, 302, 306, 201 ನೇ ಪ್ರಕರಣಗಳು ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 3 ನೇ ಮತ್ತು 4 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ, ಇದರಲ್ಲಿನ ಮೊದಲನೇ ಅರ್ಜಿದಾರನ ಮತ್ತು ಆತನ ತಂದೆ-ತಾಯಿ ಹಾಗೂ ಸಹೋದರನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ.ಎಲ್ಲಾ ಆರೋಪಿಗಳನ್ನು, ದಿನಾಂಕ 21.01.2010 ರಂದು ಎಸ್.ಸಿ.ಸಂಖ್ಯೆ: 7/2003 ರಲ್ಲಿ ಹೊರಡಿಸಿದ ತೀರ್ಪನ್ನು ಪರಿಗಣಿಸುವ ಮೂಲಕ ಖುಲಾಸೆಗೊಳಿಸಲಾಗಿದೆ.

3. ಖುಲಾಸೆಗೊಳಿಸಿದ ಸದರಿ ತೀರ್ಪಿನಿಂದ ಬಾಧಿತವಾಗಿ, ಸಂಜಯ್ ನಗರ ಪೊಲೀಸ್ ಠಾಣೆಯನ್ನು ಪ್ರತಿನಿಧಿಸಿ, ಕರ್ನಾಟಕ ಸರ್ಕಾರವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 378 ( 1) ನೇ ಮತ್ತು ( 3) ನೇ ಪ್ರಕರಣಗಳ ನಿಬಂಧನೆಗಳಿಗನುಸಾರವಾಗಿ, ಈ ನ್ಯಾಯಾಲಯದ ಮುಂದೆ ಅಪೀಲನ್ನು ದಾಖಲು ಮಾಡಿದೆ ಮತ್ತು ಕ್ರಿಮಿನಲ್ ಅಪೀಲುಸಂಖ್ಯೆ: 623/2010 ರಲ್ಲಿರುವ ಸದರಿ ಅಪೀಲನ್ನು, ಆರೋಪಿಯ ವಿರುದ್ಧ ಮಾಡಿದ ಖುಲಾಸೆಯ ತೀರ್ಪನ್ನು ಸ್ಥಿರೀಕರಿಸಿದ ತರುವಾಯ ವಜಾಗೊಳಿಸಲಾಗಿದೆ.

4. ಆರೋಪಿಯನ್ನು ಖುಲಾಸೆ ಮಾಡುವಾಗ, ಅಧಿವಿಚಾರಣಾ ನ್ಯಾಯಾಲಯವು, 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆ ಮಾಲುಗಳಿಗೆ ಸಂಬಂಧಿಸಿದಷ್ಟರಮಟ್ಟಿಗೆ ಆದೇಶ ಮಾಡಲಾಗಿದೆ.ಅವೆಲ್ಲಾ ಚಿನ್ನಾಭರಣಗಳು ಮತ್ತು ಬೆಲೆಬಾಳುವ ವಸ್ತುಗಳಾಗಿವೆ.ಮುದ್ದೆ ಮಾಲು 1 ರಿಂದ 11 ಎಂದು ಗುರುತಿಸಿ, ವಶಪಡಿಸಿಕೊಳ್ಳಲಾಗಿರುವ ಬೆಲೆಬಾಳುವ ವಸ್ತುಗಳನ್ನು, ಮೃತ ರಾಧಾಳ ತಂದೆ ಪ್ರಾಸಾ .3 ರತನ್ಲಾಲ್ಗೆ ಹಿಂದಿರುಗಿಸುವಂತೆ ಆದೇಶಿಸಲಾಗಿದೆ.ಅಪೀಲು ಅವಧಿಯ ಮುಕ್ತಾಯದ ತರುವಾಯ, 22 ರಿಂದ 41 ರವರೆಗಿನ ಮುದ್ದೇಮಾಲುಗಳನ್ನು ಸಹ ಪ್ರಾಸಾ .3 ರತನ್ಲಾಲ್ಗೆ ಹಿಂದಿರುಗಿಸುವಂತೆ ಆದೇಶಿಸಲಾಗಿದೆ.22 ರಿಂದ 41 ರವರೆಗಿನ ಮುದ್ದೆ ಮಾಲುಗಳನ್ನು ನಿಶಾನೆ ಡಿ .26 ಮೇರೆಗೆ ಮೃತ ರಾಧಾರ ಸಮೀಪದ ಸಂಬಂಧಿಯಾದ, ಪ್ರಾಸಾ .6 ಸಂಪತ್ರಾಜ್ರು ಅಭಿರಕ್ಷೆಯಲ್ಲಿರಿಸಲಾಗಿದೆ.ನಿಶಾನೆ ಡಿ .26 ಇದು, 22 ರಿಂದ 41 ರವರೆಗಿನ ಮುದ್ದೆ ಮಾಲಗಳ ಅಭಿರಕ್ಷೆಯ ಸಂಬಂಧದಲ್ಲಿ ಬರೆದ ದಸ್ತಾವೇಜಾಗಿದ್ದು, ಅದನ್ನು, ಮೃತ ರತನ್ಲಾಲ್ರು ಮಗ ನೇಮಿಚಂದರ ಸಮ್ಮುಖದಲ್ಲಿ 3 ನೇ ಆರೋಪಿಯಾದ ಲೇಹರ್ ಸಿಂಗ್ ಮೂಲಕ ಶ್ರೀ ಸಂಪತ್ರಾಜ್ರವರಿಗೆ ಹಸ್ತಾಂತರಿಸಲಾಗಿದೆ.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173 ( 2) ನೇ ಪ್ರಕರಣದ ಅಡಿಯಲ್ಲಿ ಆರೋಪ

ಪಟ್ಟಿಯನ್ನು ದಾಖಲು ಮಾಡುವಾಗ, ನಿಶಾನೆ ಡಿ .26 ಇದು, ಪೊಲೀಸರು ಸಲ್ಲಿಸಿದ ದಸ್ತಾವೇಜುಗಳ ಭಾಗವಾಗಿತ್ತು.

5. ಎಸ್.ಸಿ.ಸಂಖ್ಯೆ: 7/2003 ರಲ್ಲಿ ಹೊರಡಿಸಿದ ಖುಲಾಸೆ ತೀರ್ಪಿನ ದೃಷ್ಟಿಯಿಂದ, ಅಪೀಲುದಾರರು, ಮೃತ ಮೃತ ರಾಧಾಳ ರಾಧಾಳ ವರ್ಗ- I ರ ವಾರಸುದಾರರಾಗಿರುವುದರಿಂದ, 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆ ಮಾಲುಗಳಿಗೆ ಹಕ್ಕುಳ್ಳವರಾಗಿರುತ್ತಾರೆಂಬ ಕಾರಣದ ಮೇಲೆ ಅಗತ್ಯವಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 454 ( 1) ನೇ ಪ್ರಕರಣದ ನಿಬಂಧನೆಯ ಪ್ರಕಾರ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿದೆ. ಮೃತ ರಾಧಾಳು, 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆಮಾಲುಗಳೆಂದು ಗುರುತಿಸಲಾದ ಈ ವಸ್ತುಗಳ ನಿರುಪಾಧಿಕ ಮಾಲೀಕಳಾಗಿರುವಳೆಂದು ಹಾಗೂ ರಾಧಾಳ ಮರಣದ ಹಿನ್ನಲೆಯಲ್ಲಿ, ಮೃತಳ ಪತಿಯಾಗಿರುವ 1 ನೇ ಅರ್ಜಿದಾರ ಮತ್ತು ಮೃತಳ ಮಕ್ಕಳಾಗಿರುವ 2 ನೇ ಹಾಗೂ 3 ನೇ ಅರ್ಜಿದಾರರು, ಈ ಸಾಮಾಗ್ರಿಗಳ ಅಭಿರಕ್ಷೆಗಾಗಿ ಹಕ್ಕುಳ್ಳವರಾಗಿರುತ್ತಾರೆ ಎಂಬುದನ್ನು ಈ ಅಪೀಲಿನಲ್ಲಿ ನಮೂದಿಸಲಾಗಿದೆ.

6. ಪ್ರಾಸಾ .3, ಬೇರೆ ಯಾರು ಅಲ್ಲದೆ, ಮೃತ ರಾಧಾಳ ತಂದೆ ಎಂಬುದು ಕಂಡುಬಂದಿದೆ.ಆಕೆಯ ಮದುವೆಯ ಸಮಯದಲ್ಲಿ ತನ್ನ ಮಗಳಿಗೆ 1 ರಿಂದ 11 ರವರೆಗಿನ ಮುದ್ದೇಮಾಲನ್ನು ಅವರು ಉಡುಗೊರೆಯಾಗಿ ನೀಡಿದ್ದಾರೆ.ರತನ್ಲಾಲ್ ಮೃತರಾಗಿದ್ದಾರೆಂದು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಎಸ್.ಜಿ. ಭಗವಾನ್ ವಾದವನ್ನು ಮಂಡಿಸಿದ್ದಾರೆ.ರತನ್ಲಾಲ್ ಮೃತರಾಗಿದ್ದಾರೆ ಮತ್ತು ಅವರ ಕಾನೂನು ವಾರಸುದಾರರನ್ನು ದಾಖಲೆಯಲ್ಲಿ ತಂದಿರುವುದಿಲ್ಲ ಮತ್ತು ಹಾಗೆಂದು, ಈ ಅಪೀಲು, 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆ ಮಾಲುಗಳಿಗೆ ಸಂಬಂಧ ಪಟ್ಟಷ್ಟರಮಟ್ಟಿಗೆ, ಅದರ ಸಂಪೂರ್ಣತೆಯನ್ನು ವಜಾಗೊಳಿಸಲಾಗಿದೆ ಎಂದು ಸಹ ರತನ್ಲಾಲ್ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಎಂ. ಎಸ್. ರಾಜೇಂದ್ರ ಪ್ರಸಾದ್ರವರು ವಾದವನ್ನು ಮಂಡಿಸಿದ್ದಾರೆ.

7. 22 ರಿಂದ 41 ರವರೆಗಿನ ಮುದ್ದೆ ಮಾಲಿಗೆ ಸಂಬಂಧಪಟ್ಟಷ್ಟರಮಟ್ಟಿಗೆ, ಅವು ಮೃತ ರಾಧಾಳ ಸಮೀಪದ ಸಂಬಂಧಿಯಾದ, ಪ್ರಾ.ಸಾ .6 ಸಂಪತ್ರಾಜ್ ಅಭಿ ರಕ್ಷೆಯಲ್ಲಿವೆ.ಅವರು, ಶಾಶ್ವತವಾಗಿ ಅವುಗಳನ್ನು ತಮ್ಮ ಅಭಿರಕ್ಷೆಯಲ್ಲಿರಿಸಿಕೊಳ್ಳಲು ಕಾನೂನುಬದ್ಧವಾಗಿ ಹಕ್ಕುಳ್ಳವರಾಗಿರುವುದಿಲ್ಲ.22 ರಿಂದ 41 ರವರೆಗಿನ ಮುದ್ದೆಮಾಲುಗಳು ಅವರ ಅಭಿರಕ್ಷೆಯಲಿದ್ದು, ಸಂಬಂಧಪಟ್ಟ ವಸ್ತುಗಳ ವಿಲೆ ಮಾಡುವ ಸಂಬಂಧದಲ್ಲಿ ಸೂಕ್ತ ಆದೇಶ ಹೊರಡಿಸಲು ಈ ನ್ಯಾಯಾಲಯದ ದಾರಿಗೆ ಯಾವುದೂ ಅಡ್ಡ ಬರುವುದಿಲ್ಲ.

8. ಈ ತೀರ್ಪಿನಲ್ಲಿ, ರತನ್ಲಾಲ್ರವರಿಗೆ ಎಲ್ಲಾ ಮುದ್ದೆ ಮಾಲುಗಳನ್ನು ಏಕೆ ಹಿಂದಿರುಗಿಸಬಾರದು ಎಂಬುದಕ್ಕೆ ಮಾನ್ಯ ನ್ಯಾಯವಾದಿಗಳು ಯಾವುದೇ ಕಾರಣಗಳನ್ನು ತಿಳಿಸಿಲ್ಲ.ಇದಕ್ಕೆ ಸಂಬಂಧಪಟ್ಟಂತೆ, ಮುಖ್ಯ ವಸ್ತುಗಳ ಅಂತಿಮ ವಿಲೆವಾರಿಗೆ ಸಂಬಂಧಪಡುವಷ್ಟರಮಟ್ಟಿಗೆ ಮೊದಲನೇ ಅಪೀಲು ನ್ಯಾಯಾಲಯದ ಅಧಿಕಾರ ಏನು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 386 ನೇ ಪ್ರಕರಣವು, ಅಪೀಲು ನ್ಯಾಯಾಲಯದ ಅಧಿಕಾರ ಕುರಿತು ವ್ಯವಹರಿಸುತ್ತದೆ.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 386 ನೇ ಪ್ರಕರಣವನ್ನು ಉಲ್ಲೇಖಿಸುವುದು ಉಪಯುಕ್ತವಾಗಿದ್ದು, ಸದರಿ ಉಪಬಂಧವನ್ನು ಈ ಕೆಳಗಿನಂತೆ ಉದ್ದರಿಸಲಾಗಿದೆ:

386. ಅಪೀಲು ನ್ಯಾಯಾಲಯದ ಅಧಿಕಾರಗಳು:-ಅಂಥ ದಾಖಲೆಯನ್ನು ಪರಿಶೀಲಿಸಿ ಮತ್ತು ಅಪೀಲುದಾರನನ್ನು ಅಥವಾ ಆತನ ನ್ಯಾಯವಾದಿಯು (ಪೀಡನರ್ು) ಹಾಜರಾಗಿದ್ದರೆ, ಅವರ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಹಾಜರಾಗಿದ್ದರೆ, ಅವರ ಹಾಗೂ 377 ನೇ ಪ್ರಕರಣ ಅಥವಾ 378 ನೇ ಪ್ರಕರಣದ ಮೇರೆಗಿನ ಅಪೀಲಿನ ಸಂದರ್ಭದಲ್ಲಿ, ಆಪಾದಿತನು ಹಾಜರಾಗಿದ್ದರೆ, ಆತನ, ವಿಚಾರಣೆ ಮಾಡಿದ ತರುವಾಯ, ಅಪೀಲು ನ್ಯಾಯಾಲಯವು, ಹಸ್ತಕ್ಷೇಪಕ್ಕೆ ಸಾಕಷ್ಟು ಕಾರಣವಿಲ್ಲವೆಂದು ಪರಿಗಣಿಸಿದರೆ, ಅಪೀಲನ್ನು ವಜಾಗೊಳಿಸಬಹುದು ಅಥವಾ;

(ಎ) ಅಪರಾಧ ನಿರ್ಣಯದ ಆದೇಶದ ಮೇಲಿನ ಅಪೀಲಿನಲ್ಲಿ, ಅಂಥ ಆದೇಶವನ್ನು ವಿಪರ್ಯಯಗೊಳಿಸಬಹುದು ಮತ್ತು ಸಂದರ್ಭಾನುಸಾರ, ಮತ್ತಷ್ಟು ವಿಚಾರಣೆಯನ್ನು ಮಾಡಬೇಕೆಂದು ಅಥವಾ ಆಪಾದಿತನ ಮರು-ವಿಚಾರಣೆ ಮಾಡಬೇಕೆಂದು ಅಥವಾ ವಿಚಾರಣೆ ಮಾಡಬೇಕೆಂದು ನಿರ್ದೇಶಿಸಬಹುದು ಅಥವಾ ಆತನನ್ನು ತಪ್ಪಿತಸ್ಥನೆಂದು ನಿರ್ಣಯಿಸಿ, ಕಾನೂನಿಗನುಸಾರವಾಗಿ ಆತನ ಮೇಲೆ ಶಿಕ್ಷೆ ವಿಧಿಸಬೇಕೆಂದು ಆದೇಶವನ್ನು ಹೊರಡಿಸಬಹುದು; ಎ

(ಬಿ) ಅಪರಾಧ ನಿರ್ಣಯದಿಂದ ಅಪೀಲಿನಲ್ಲಿ,

(i) ನಿರ್ಣಯವನ್ನು ಮತ್ತು ಶಿಕ್ಷೆಯನ್ನು ವಿಪರ್ಯಯ ಮಾಡಬಹುದು ಮತ್ತು ಆರೋಪಿಯನ್ನು ಖುಲಾಸೆಗೊಳಿಸಬಹುದು ಅಥವಾ ವಿಮೋಚನೆ ಗೊಳಿಸಬಹುದು ಅಥವಾ ಅ ಂ ಥ ಅಪೀಲು ನ್ಯಾಯಾಲಯಕ್ಕೆ ಅಧೀನವಾಗಿರುವ ಸಕ್ಷಮ ಅಧಿಕಾರ ವ್ಯಾಪ್ತಿ ಇರುವ ನ್ಯಾಯಾಲಯವು ಮರು-ವಿಚಾರಣೆ ಮಾಡ ಬೇಕೆ ಂ ದು ಅಥ ವಾ ವಿಚಾರಣೆಗೆ ಒಪ್ಪಿಸಬೇಕೆಂದು ಆದೇಶಿಸಬಹುದು; ಅಥವಾ

(ii) ಶಿಕ್ಷೆಯನ್ನು ಉಳಿಸಿಕೊಂಡು ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥವಾ ಬದಲಾಯಿಸದೆ, ಶಿಕ್ಷೆಯ ಸ್ವರೂಪ ಅಥವಾ ವ್ಯಾಪ್ತಿಯನ್ನು, ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು, ಅದನ್ನು ಹೆಚ್ಚಿಸದಂತೆ ಬದಲಾಯಿಸಬಹುದು;

(ಸಿ) ಶಿಕ್ಷೆಯ ಹೆಚ್ಚಳಕ್ಕಾಗಿ ಹೂಡಿದ ಅಪೀಲಿನಲ್ಲಿ,

(1) ನಿರ್ಣಯವನ್ನು ಅಥವಾ ಶಿಕ್ಷೆಯನ್ನು ವಿಪರ್ಯಂತಗೊ ಸಬಹುದು ಮತ್ತು ಆರೋಪಿಯನ್ನು ಖುಲಾಸೆಗೊಳಿಸಬಹುದು ಅಥವಾ ಅಪರಾಧದ ವಿಚಾರಣೆ ಮಾಡಲು ಸಕ್ಷಮವಾದ ನ್ಯಾಯಾಲಯವು ಆತನನ್ನು ಮರು-ವಿಚಾರಣೆ ಮಾಡ ಬೇಕೆಂದು ಆದೇಶ ಮಾಡಬಹುದು; ಅಥವಾ

(ii) ಶಿಕ್ಷೆಯನ್ನು ಉಳಿಸಿಕೊಂಡು ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥವಾ ಬದಲಾಯಿಸದೆ, ಶಿಕ್ಷೆಯ ಸ್ವರೂಪ ಅಥವಾ ವ್ಯಾಪ್ತಿಯನ್ನು, ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು ಅದನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಬದಲಾಯಿಸಬಹುದು;

(ಡಿ) ಇತರೇ ಯಾವುದೇ ಆದೇಶದ ಮೇಲೆ ಹೂಡಲಾದ ಅಪೀಲಿನಲ್ಲಿ, ಅಂಥ ಆದೇಶವನ್ನು ಬದಲಾಯಿಸಬಹುದು ಅಥವಾ ವಿಪರ್ಯಯಗೊಳಿಸಬಹುದು;

(ಇ) ನ್ಯಾಯಸಮ್ಮತವಾಗಬಹುದಾದ ಅಥವಾ ಯುಕ್ತವಾಗ ಬಹುದಾದ ಯಾವುದೇ ತಿದ್ದುಪಡಿ ಅಥವಾ ಯಾವುದೇ ಅನುಷಂಗಿಕ ಅಥವಾ ಪ್ರಾಸಂಗಿಕ ಆದೇಶವನ್ನು ಮಾಡಬಹುದು;

ಪರಂತು, ಶಿಕ್ಷೆಯನ್ನು ಹೆಚ್ಚಿಸುವುದರ ವಿರುದ್ಧ ಕಾರಣ ತೋರಿಸಲು ಯುಕ್ತವಾದ ಅವಕಾಶವನ್ನು ಆಪಾದಿತನಿಗೆ ಕೊಟ್ಟ ಹೊರತು, ಆ ಶಿಕ್ಷೆಯನ್ನು ಹೆಚ್ಚಿಸತಕ್ಕದ್ದಲ್ಲ; ಮತ್ತೂ ಪರಂತು, ಅಪೀಲಿನಲ್ಲಿರುವ ಆದೇಶವನ್ನು ಅಥವಾ ಶಿಕ್ಷೆಯ ಆದೇಶವನ್ನು ಮಾಡಿದ ನ್ಯಾಯಾಲಯವು, ಆ ಅಪರಾಧಕ್ಕಾಗಿ ವಿಧಿಸಬಹುದಾದುದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ಅಪೀಲು ನ್ಯಾಯಾಲಯವು ಆಪಾದಿತನು ಮಾಡಿರುವನೆಂದು ಅದು ಅಭಿಪ್ರಾಯಪಡುವ ಅಪರಾಧಕ್ಕಾಗಿ ವಿಧಿಸತಕ್ಕದ್ದಲ್ಲ.

ದಂಡ ಪ್ರಕ್ರಿಯಾ ಸಂಹಿತೆಯ 386 ನೇ ಪ್ರಕರಣದ (ಇ) ಉಪ-ಪ್ರಕರಣವು, ನ್ಯಾಯಸಮ್ಮತ ಮತ್ತು ಸೂಕ್ತವೆಂದು ಭಾವಿಸಿದಂಥ ಆದೇಶಗಳನ್ನು ಹೊರಡಿಸಲು, ಮೊದಲನೇ ಅಪೀಲು ನ್ಯಾಯಾಲಯವನ್ನು ಸಮರ್ಥಗೊಳಿಸಿದೆ.386 ನೇ ಪ್ರಕರಣದ (ಎ) ಯಿಂದ (ಡಿ) ವರೆಗಿನ ಉಪ-ಪ್ರಕರಣಗಳು, ಅಪರಾಧ ನಿರ್ಣಯದ ಮತ್ತು ಶಿಕ್ಷೆಯ ಸ್ಥಿರೀಕರಣವನ್ನು ಅಥವಾ ಬದಲಾವಣೆಯನ್ನು ಅಥವಾ ಮಾರ್ಪಾಡನ್ನು ಕುರಿತು ವ್ಯವಹರಿಸುತ್ತವೆ.ದಂಡ ಪ್ರಕ್ರಿಯಾ ಸಂಹಿತೆಯ 386 ನೇ ಪ್ರಕರಣದ (ಇ) ಉಪ-ಪ್ರಕರಣವು, ಈ ರೀತಿಯ ಸನ್ನಿವೇಶಗಳನ್ನು ಮತ್ತು ಅಪರಾಧ ನಿರ್ಣಯವನ್ನು ಹಾಗೂ ಶಿಕ್ಷೆಯನ್ನು ಹೊರತುಪಡಿಸಿ ಬೇರೆ ವಿವಾದಾಂಶಗಳ ಸಂಬಂಧದಲ್ಲಿ ಸೂಕ್ತ ಆದೇಶಗಳನ್ನು ಹೊರಡಿಸುವ ಕಡೆಗೆ ಗಮನ ಹರಿಸುತ್ತದೆ.ಕ್ರಿಮಿನಲ್ ಮೊಕದ್ದಮೆಗಳಲ್ಲಿ ಬರುವ ಮುಖ್ಯ ವಸ್ತುಗಳ ಸ್ವಾಮ್ಯ ಮತ್ತು ಅಭಿರಕ್ಷೆಗೆ ಸಂಬಂಧಿಸಿದಂತೆ, ನ್ಯಾಯಾಲಯವು, ಎಲ್ಲಾ ಮೊಕದ್ದಮೆಗಳಲ್ಲಿ ಸೂಕ್ತ ಸಿವಿಲ್ ನ್ಯಾಯಾಲಯದಿಂದ ನಿರ್ಣಯ ಪಡೆಯಬೇಕೆಂದು ಪಕ್ಷಕಾರರಿಗೆ ಹೇಳುವ ಅಗತ್ಯವಿಲ್ಲ.

9. ದಂಡ ಪ್ರಕ್ರಿಯಾ ಸಂಹಿತೆಯ 352 ನೇ ಪ್ರಕರಣವು, ಅಧಿವಿಚಾರಣೆಯನ್ನು ವ್ಯವಹರಿಸುವ ಕ್ರಿಮಿನಲ್ ನ್ಯಾಯಾಲಯವು, ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ಹಾಜರುಪಡಿಸಲಾಗುವ ಸ್ವತ್ತುಗಳ ಮತ್ತು

ದಸ್ತಾವೇಜುಗಳ ಅಂತಿಮ ವಿಲೆಗೆ ಸಂಬಂಧಿಸಿದಂತೆ ಸೂಕ್ತ ಆದೇಶಗಳನ್ನು ಹೊರಡಿಸಬೇಕು ಎಂಬುದನ್ನು ಕಡ್ಡಾಯಗೊಳಿಸುತ್ತದೆ.ಮೊದಲನೇ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆಯಾದ್ದರಿಂದ, ಎನ್. ಮಾಧವನ್ ವಿರುದ್ಧ-ಕೇರಳ ಸರ್ಕಾರ (ಎಐಆರ್ 1979 ಎಸ್ಸಿ 1829) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿವರಿಸಿದಂತೆ, ಕೆಲವೊಂದು ಪರಿಮಿತಿವರೆಗೆ, ಕ್ರಮದ ಉದ್ದೇಶಕ್ಕೆ, ಅದರ ಅಧಿಕಾರಗಳನ್ನು ಚಲಾಯಿಸಬೇಕಾಗುತ್ತದೆ.ಸದರಿ ತೀರ್ಪಿನ 10 ನೇ ಕಂಡಿಕೆಯನ್ನು ಪರಾಮರ್ಶಿಸುವುದು ಉಪಯುಕ್ತವಾದುದಾಗಿದೆ, ಅದರಲ್ಲಿನ ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಮಾಡಬಹುದು ' ಎಂಬ ಪದಗಳು, ಸಂಬಂಧಪಟ್ಟ ಸ್ವತ್ತಿನ ಅಂತಿಮ ವಿಲೆಯಷ್ಟರಮಟ್ಟಿಗೆ, ಸರ್ಕಾರದಲ್ಲಿ ನಿಹಿತವಾಗಿರುವ ವಿವೇಚನೆಯನ್ನು ಸೂಚಿಸುತ್ತವೆ.ಅಂಥ ವಿವೇಚನೆಯ ಚಲಾವಣೆಯು, ಅಂತರ್ನಿಹಿತವಾಗಿ, ನ್ಯಾಯಿಕ ಪ್ರಕಾರ್ಯವಾಗಿದೆ ಮತ್ತು ಆದ್ದರಿಂದಾಗಿ, ವಿಲೆಯ ವಿಧಾನ ಅಥವಾ ರೀತಿಯ ಆಯ್ಕೆಯನ್ನು, ಮನಸೋ-ಇಚ್ಛೆ ಮಾಡದೆ, ಕಾರಣ ಮತ್ತು ನ್ಯಾಯದ ಆಧಾರದ ಚ ಮೇಲೆ ದೋಷರಹಿತ ತತ್ವಗಳಿಗನುಸಾರವಾಗಿ ನ್ಯಾಯಿಕವಾಗಿ, ಮಾಡಬೇಕು.ಅದರ ಮುಂದಿರುವ ಆ ವರ್ಗ ಮತ್ತು ಸ್ವತ್ತಿನ ಸ್ವರೂಪವನ್ನು ಮತ್ತು ವಿಷಯವಸ್ತುವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸದರಿ ತೀರ್ಮಾನದಲ್ಲಿ ಕಂಡಿಕೆಸಂಖ್ಯೆ: 10 ಸುಸಂಬದ್ಧವಾಗುತ್ತದೆ, ಅದನ್ನು ಈ ಕೆಳಗೆ ಉದ್ಧರಿಸಲಾಗಿದೆ:

10. ಈ ಪ್ರಕರಣದಲ್ಲಿ ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು ' ಎಂಬ ಪದಗಳು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೂರು ವಿಧಾನಗಳ ಪೈಕಿ ಯಾವುದೇ ಒಂದು ವಿಧಾನದಲ್ಲಿ ಸ್ವತ್ತಿನ ವಿಲೆವಾರಿ ಮಾಡುವ ವಿವೇಚನೆಯು ನ್ಯಾಯಾಲಯದಲ್ಲಿ ನಿಹಿತವಾಗಿರುತ್ತದೆ ಎಂದು ತಿಳಿಸುತ್ತವೆ.ಆದರೆ, ಅಂಥ ವಿವೇಚನೆಯನ್ನು ಚಲಾಯಿಸುವುದು ಅಂತರ್ನಿಹಿತವಾಗಿ ನ್ಯಾಯಿಕ ಪ್ರಕಾರ್ಯವಾಗಿದೆ.ವಿಲೆಯ ವಿಧಾನ ಅಥವಾ ರೀತಿಯ ಆಯ್ಕೆಯನ್ನು, ಮನಸೋ ಇಚ್ಛೆ ಮಾಡದೆ, ಸ್ವತ್ತಿನ ವರ್ಗ ಮತ್ತು ಸ್ವರೂಪ ಹಾಗೂ ಅದರ ಮುಂದಿರುವ ವಸ್ತುವಿಷಯವನ್ನು ಗಮನದಲ್ಲಿರಿಸಿಕೊಂಡು, ಕಾರಣ ಮತ್ತು ನ್ಯಾಯದ ಆಧಾರದ ಮೇಲೆ, ಮೂಲ ತತ್ವಗಳಿಗೆ ಅನುಸಾರವಾಗಿ, ನ್ಯಾಯಿಕವಾಗಿ ಮಾಡಬೇಕು.ಅಂಥ ಒಂದು ಉತ್ತಮ ಮಾನ್ಯತೆ ಪಡೆದ ತತ್ವವೆಂದರೆ, ಆರೋಪಿಯನ್ನು ವಿಚಾರಣೆ ಅಥವಾ ಅಧಿವಿಚಾರಣೆ ಮಾಡಿದ ತರುವಾಯ, ಆಪಾದಿತನನ್ನು ಬಿಡುಗಡೆಗೊಳಿಸಿದ್ದಲ್ಲಿ ಅಥವಾ ಖುಲಾಸೆಗೊಳಿಸಿದ್ದಲ್ಲಿ, ಈ ನ್ಯಾಯಾಲಯವು, ಯಾವ ವ್ಯಕ್ತಿಯ ಅಭಿರಕ್ಷೆಯಿಂದ (ಎ) ಅಥವಾ (ಬಿ) ವರ್ಗದ ಸ್ವತ್ತನ್ನು ಸಾಮಾನ್ಯವಾಗಿ ಪುನಃ ಸ್ವಾಧೀನ ಮಾಡಿಕೊಂಡಿದೆಯೋ ಆ ವ್ಯಕ್ತಿಯ ಸ್ವಾಧೀನಕ್ಕೆ ನೀಡತಕ್ಕದ್ದು.ಈ ಪ್ರಯೋಜನಕಾರಿ ಪದ್ಧತಿಯ ನಿಯಮದಿಂದ ದೂರಸರಿಯುವುದನ್ನು, ಪ್ರಸ್ತುತ ಮೊಕದ್ದಮೆಯಲ್ಲಿರುವಂತೆ ಅಂಥ ಆರೋಪಿಯ ಅಭಿರಕ್ಷೆಯಿಂದ ಜಪ್ತಿ ಮಾಡಿದ ಮತ್ತು ಆತನಿಗೆ ಸೇರಿರುವ ಪ್ರಶ್ನಿತ ಸ್ವತ್ತಿನ ಬಗ್ಗೆ ಯಾವುದೇ ಸಂಶಯ ಇಲ್ಲದೇ ಇದ್ದಾಗ ಮಾಡಿದಂತೆ, ಮಾಡಲಾಗುವುದಿಲ್ಲ."

10. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಾ.ಸಾ .3, ಮೃತ ರತನ್ಲಾಲ್ರವರು, ತಮ್ಮ ಮಗಳು ರಾಧಾಳಿಗೆ ಕೆಲವು ಆಭರಣಗಳನ್ನು ಮತ್ತು 1 ನೇ ಆರೋಪಿಗೆ ಕೆಲವು ಉಡುಗೊರೆಗಳನ್ನು, ಅವರುಗಳ ವಿವಾಹದ ಸಂಬಂಧದಲ್ಲಿ ನೀಡಿದ್ದರು.ಪ್ರಾಸಿಕ್ಯೂಷನ್ ಅದರ ಮೊಕದ್ದಮೆಯನ್ನು ಸ ಂ ದೇಹಾತೀತವಾಗಿ ರುಜುವಾತುಪಡಿಸುವಲ್ಲಿ ಅಸಮರ್ಥವಾದ ಕಾರಣದಿಂದಾಗಿ, ಆರೋಪಿಯನ್ನು, ಗೌರವಪೂರ್ವಕವಾಗಿ ಖುಲಾಸೆ ಮಾಡಿರುವುದಿಲ್ಲ.ವಿವಾಹದ ಸಂಬಂಧದಲ್ಲಿ ಅವರು, ವಿವಿಧ ವ್ಯಕ್ತಿಗಳಿಂದ ಉಡುಗೊರೆಯಾಗಿ ಕೆಲವೊಂದು ಆಭರಣಗಳು ಮತ್ತು ಬೆಲೆಬಾಳುವ ವಸ್ತುಗಳನ್ನು ಸ್ವೀಕರಿಸಿದ್ದಾರೆ.ಈ ಎಲ್ಲಾ ಬಾಬುಗಳು, ಮೃತ ರಾಧಾಳ ಹತ್ತಿರದ ಸಂಬಂಧಿಯಾದ ಪ್ರಾ.ಸಾ .6, ಸಂಪತ್ರಾಜ್ ಅವರಿಗೆ ಅದನ್ನು ಹಸ್ತಾಂತರಿಸುವಾಗ, 3 ನೇ ಆರೋಪಿ ಲೆಹರ್ ಸಿಂಗ್ (ಆರೋಪಿಯ ತಂದೆ) ಬರೆದು ಕೊಟ್ಟ ದಸ್ತಾವೇಜಾದ ನಿಶಾನೆ ಡಿ -26 ಯಲ್ಲಿ ಸೂಚಿಸಲಾಗಿದೆ.

11. ಪ್ರಸ್ತುತ ಮೊಕದ್ದಮೆಯಲ್ಲಿ, ಇದರಲ್ಲಿನ ಎರಡನೇ ಅಪೀಲುದಾರಳಾದ ನಮ್ರತಾ, ಮೃತ ರಾಧಾಳ ಮಗಳು ಮತ್ತು ಆಕೆ ಸುಮಾರು 20 ವರ್ಷ ವಯಸ್ಸಿನವಳು ಎಂಬ ವಾಸ್ತವವನ್ನು ಮರೆಯಲಾಗದು.ರಾಧಾ ಜೀವಂತವಾಗಿದ್ದರೂ ಕೂಡ, ಆಕೆಯು, ತನ್ನ ಮಗಳ ಮದುವೆಯ ಸಲುವಾಗಿ ಸಾಕಷ್ಟು ಚಿನ್ನಾಭರಣಗಳನ್ನು ನೀಡುತ್ತಿದ್ದಳು.ಹಾಗಾಗಿ ಈ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.ರಾಧಾಳು, ತನ್ನ ಮಗಳಿಗೆ ಉಡುಗೊರೆಯಾಗಿ ಕೆಲವೊಂದು ಚಿನ್ನಾಭರಣಗಳನ್ನು ನಿಶ್ಚಿತವಾಗಿ ನೀಡಿರುತ್ತಿದ್ದಳು.ಆದ್ದರಿಂದ, 22 ರಿಂದ 41 ರವರೆಗಿನ ಮುದ್ದೆ ಮಾಲುಗಳನ್ನು, 2 ನೇ ಅಪೀಲುದಾರಳಾದ ಕುಮಾರಿ ನಮ್ರತಾಳಿಗೆ ಹಸ್ತಾಂತರಿಸುವುದರಿಂದ, ಮೃತ ರಾಧಾಳ ಆತ್ಮಕ್ಕೆ ಇದರಿಂದ ಶಾಂತಿ ಸಿಗುತ್ತದೆಂಬುದು ನಮ್ಮ ನಂಬಿಕೆಯಾಗಿದೆ.ಹಾಗಾಗಿ, ಪ್ರಾಸಾ .6

ಸಂಪತ್ರಾಜ್ ಅಭಿರಕ್ಷೆಯಲ್ಲಿರುವ 22 ರಿಂದ 41 ರವರೆಗಿನ ಮುದ್ದೆ ಮಾಲುಗಳನ್ನು, ಕೆಲವು ವರ್ಷಗಳೊಳಗೆ ವಿವಾಹವಾಗಲಿರುವ ಕುಮಾರಿ ನಮ್ರುತಾಗೆ ನೀಡಬೇಕೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.ಹೀಗಾಗಿ, ತಾಯಿಯ ಭಾವನೆಗೆ ಸಹ ಗೌರವಕೊಟ್ಟಂತಾಗುತ್ತದೆ.

12. 1 ರಿಂದ 11 ರವರೆಗಿನ ಮುದ್ದೆ ಮಾಲಿಗೆ ಸಂಬಂಧಪಟ್ಟಷ್ಟರಮಟ್ಟಿಗೆ, ಅವುಗಳನ್ನು ರತನ್ಲಾಲ್ಗೆ ಹಸ್ತಾಂತರಿಸಲಾಗಿದ್ದು, ಅವರು ಈಗ ಜೀವಂತವಾಗಿಲ್ಲ.ಒಪ್ಪಿಕೊಂಡಂತೆ, ಅವರ ಮಗಳು ರಾಧಾಳಿಗೆ ಆಕೆಯ ವಿವಾಹದ ಸಮಯದಲ್ಲಿ ಅವರ ಜೀವಿತ ಕಾಲದಲ್ಲೇ ಅವುಗಳನ್ನು ರತನ್ಲಾಲ್ ನೀಡಿದ್ದಾರೆ.ಕಾನೂನು ಪ್ರತಿನಿಧಿಗಳು, ಇದನ್ನು ಉಪಯೋಗಿಸಿಕೊಳ್ಳುವರೆಂದು ನಾವು ಭಾವಿಸುವುದು ಸೂಕ್ತವಾದುದಾಗಿದೆ.ಮೃತ ರತನ್ಲಾಲ್ ಕಾನೂನು ಪ್ರತಿನಿಧಿಗಳನ್ನು ದಾಖಲೆಯಲ್ಲಿ ತರಲಾಗಿಲ್ಲವೆಂಬ ಸಂಗತಿಯಿಂದ ಸಹ ಇದು ದೃಢಪಟ್ಟಿರುವುದರಿಂದ, ರತನ್ಲಾಲ್ ವಿರುದ್ಧದ ಅಪೀಲನ್ನು ಮುಕ್ತಾಯಗೊಳಿಸಲಾಗಿದೆ.

13. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತ ರಾಧಾಳ ಮಗಳಾಗಿರುವ ಕುಮಾರಿ ನಮ್ರುತಾ-ಎರಡನೇ ಅಪೀಲುದಾರಳು, ಮೃತ ರಾಧಾಳ ಸಮೀಪದ ಸಂಬಂಧಿಯಾದ ಪ್ರಾಸಾ .6 ಸಂಪತ್ರಾಜ್ರ ಅಭಿರಕ್ಷೆಯಲ್ಲಿರುವ 22 ರಿಂದ 41 ರವರೆಗಿನ ಮುದ್ದೆ ಮಾಲಿಗೆ ಹಕ್ಕುಳ್ಳವಳಾಗಿದ್ದು, ಪ್ರಾ.ಸಾ .6 ಇವರು, 22 ರಿಂದ 41 ರವರೆಗಿನ ಮುದ್ದೆಮಾಲುಗಳನ್ನು ತನ್ನ ಅಭಿರಕ್ಷೆಯಲ್ಲಿಟ್ಟುಕೊಳ್ಳುವುದನ್ನು ಮುಂದುವರಿಸತಕ್ಕದ್ದು ಮತ್ತು ಕುಮಾರಿ ನಮ್ರುತಾಳ ವಿವಾಹದ ಸಮಯದಲ್ಲಿ ಅಥವಾ ಇಂದಿನಿಂದ ಮೂರು ವರ್ಷಗಳ ಮುಕ್ತಾಯದ ತರುವಾಯ ಕೂಡಲೇ, ಇವುಗಳಲ್ಲಿ ಯಾವುದು ಮೊದಲೋ ಅಂದು ಅದನ್ನು ಆಕೆಗೆ ಒಪ್ಪಿಸತಕ್ಕದ್ದು.

ಆಜ್ಞೆ

1 ರಿಂದ 11 ರವರೆಗಿನ ಮುದ್ದೆಮಾಲನ್ನು ಈಗ ಮೃತರಾಗಿರುವ ರತನ್ಲಾಲ್ಗೆ ಹಸ್ತಾಂತರಿಸಿರುವುದನ್ನು ಹಾಗೂ ಪ್ರಾಸಾ .6 ಸಂಪತ್ರಾಜ್ ಅಭಿರಕ್ಷೆಯಲ್ಲಿರುವ, 22 ರಿಂದ 41 ರವರೆಗಿನ ಮುದ್ದೆ ಮಾಲನ್ನು, ದೀಪಕ್ ಕುಮಾರ್ ಮತ್ತು ಮೃತ ರಾಧಾಳ ಮಗಳಾಗಿರುವ ಎರಡನೇ ಅಪೀಲುದಾರಳಾದ ನಮ್ರುತಾಳಿಗೆ, ಆಕೆಯ ವಿವಾಹದ ಸಮಯದಲ್ಲಿ ಅಥವಾ ಇಂದಿನಿಂದ ಮೂರು ವರ್ಷಗಳ ಮುಕ್ತಾಯದ ನ ಂ ತರ ಕೂಡಲೇ, ಇವುಗಳಲ್ಲಿ ಯಾವುದು ಮೊದಲೋ ಅ ಂ ದು ಹಸ್ತಾಂತರಿಸಬೇಕೆಂಬುದನ್ನು ಸ್ಥಿರೀಕರಿಸಿ, ಅಪೀಲನ್ನು ಭಾಗಶಃ ಅಂಗೀಕರಿಸಲಾಗಿದೆ.

ತದನುಸಾರವಾಗಿ, ಅಧಿವಿಚಾರಣಾ ನ್ಯಾಯಾಲಯದ ಆದೇಶವು, 1 ರಿಂದ 11 ರವರೆಗಿನ ಮತ್ತು 22 ರಿಂದ 41 ರವರೆಗಿನ ಮುದ್ದೆ ಮಾಲುಗಳ ಅಂತಿಮ ವಿಲೆಗೆ ಸಂಬಂಧಪಟ್ಟಷ್ಟರಮಟ್ಟಿಗೆ ಮಾರ್ಪಾಡಾಗುತ್ತದೆ.

ವಿಚಾರಣಾ ನ್ಯಾಯಾಲಯವು, ಪ್ರಾ.ಸಾ .6, ಸಂಪತ್ರಾಜ್ ಅವರ ಪ್ರಸ್ತುತ ವಿಳಾಸವನ್ನು ವಿಚಾರಿಸಿ ತಿಳಿದುಕೊಂಡ ನಂತರ, ಈ ಸಂಬಂಧದಲ್ಲಿ ಅವರಿಗೆ ತಿಳಿಸುವುದು.